**ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಹೊನ್ನಾವರ**

**ಫೌಜುದಾರಿ ಪ್ರಕರಣ ಸಂಖ್ಯೆ : 93/2020**

**ಚಾ.ಸಾಃ 5, ಫ್ರಾ.ಸಾಃ 3**

| | |
|---|---|
| ಸಾಕ್ಷಿದಾರನ ಹೆಸರು | ಮಹಾಬಲೇಶ್ವರ ನಾಯ್ಕ |
| ತಂದೆಯ ಹೆಸರು | ರಮೇಶ ನಾಯ್ಕ |
| ವಯಸ್ಸು | 31 ವರ್ಷಗಳು |
| ಉದ್ಯೋಗ | ಚಾಲಕ |
| ವಾಸ್ತವ್ಯ | ಎಮ್ಮೆಫೈಲ್, ಹೊನ್ನಾವರ |

**ಸಾಕ್ಷಿಯನ್ನು ದಿನಾಂಕಃ 13-10-2022 ರಂದು ಕರೆಸಿ ಪ್ರಮಾಣೀಕರಿಸಲಾಯಿತು.**

**ಮುಖ್ಯ ವಿಚಾರಣೆಃ ಎಪಿಪಿಯವರಿಂದ,**

ಸಾಕ್ಷಿಗೆ ಈ ಪ್ರಕರಣದ ದಿನಾಂಕ 31-07-2020ರ ಮಾಲು ಜಪ್ತು ಪಂಚನಾಮೆಯನ್ನು ತೋರಿಸಲಾಗಿ ಅದರ ಮೇಲಿನ ಒಂದು ಸಹಿಯನ್ನು ತನ್ನದು ಎಂದು ತಿಳಿಸಿರುತ್ತಾರೆ.

**ಸದರಿ ಪಂಚನಾಮೆಯ ಮೂಲ ಪ್ರತಿಯು ಸಿಸಿ ನಂ.76/2020ರಲ್ಲಿ ಇದ್ದು ಸದರಿ ಪ್ರಕರಣದ ಕಡತವನ್ನು ನ್ಯಾಯಾಲಯಕ್ಕೆ ತರಿಸಲಾಗಿರುತ್ತದೆ. ಈ ಪ್ರಕರಣದಲ್ಲಿ ಹಾಜರು ಮಾಡಿರುವ ನೈಜ ಪ್ರತಿಯನ್ನು ಮೂಲ ಪ್ರತಿಯ ಜೊತೆ ಹೋಲಿಕೆ ಮಾಡಿ ನೋಡಲಾಗಿ ಎರಡರಲ್ಲಿರುವ ಒಕ್ಕಣೆಗಳು ಒಂದೇ ರೀತಿ ಇರುವುದರಿಂದ ಈ ಪ್ರಕರಣದಲ್ಲಿ ಹಾಜರು ಮಾಡಿರುವ ನೈಜ ಪ್ರತಿಯನ್ನು ಆರೋಪಿಗಳ ಪರ ವಕೀಲರ ಒಪ್ಪಿಗೆ ಮೇರೆಗೆ ನಿಪಿ-5 ಎಂದು ಗುರುತಿಸಲಾಯಿತು. ಅದರ ಮೇಲಿನ ಸಾಕ್ಷಿ ಸಹಿಯನ್ನು ನಿಪಿ-5(ಎ) ಎಂದು ಗುರುತಿಸಲಾಯಿತು.**

ಸುಮಾರು ಒಂದು ವರ್ಷದ ಹಿಂದೆ ನಾನು ಚಂದಾವರ ಗ್ರಾಮಕ್ಕೆ ಬಾಡಿಗೆಗೆ ಹೋಗಿದ್ದಾಗ ಸದರಿ ಸಹಿಯನ್ನು ಚಂದಾವರ ಗ್ರಾಮದ ಚರ್ಚಿನ ಸ್ವಲ್ಪ ಕೆಳಗೆ ಇರುವ ರಸ್ತೆಯ ಪಕ್ಕದಲ್ಲಿ ಪಡೆದಿರುತ್ತಾರೆ. ಆ ಸಂದರ್ಭದಲ್ಲಿ ನನ್ನ ಜೊತೆ ಚಾಸಾ-4 ನಿತಿನ್ ನಾಯ್ಕ ಹಾಜರಿದ್ದರು. ಆ ಸಂದರ್ಭದಲ್ಲಿ ನಾನು, ಚಾಸಾ-4 ಮತ್ತು ಪೋಲಿಸರು ಮಾತ್ರ ಇದ್ದೆವು. ಪೋಲೀಸರು ಸದರಿ ಸ್ಥಳಕ್ಕೆ ಯಾವುದೇ ವ್ಯಕ್ತಿಗಳನ್ನು ಕರೆತಂದಿರಲಿಲ್ಲ. ಯಾವುದೇ ವ್ಯಕ್ತಿಗಳು ಸ್ಥಳ ತೋರಿಸುತ್ತೇನೆ ಎಂದು ನಮ್ಮನ್ನು ಅಲ್ಲಿಗೆ ಕರೆದುಕೊಂಡು ಹೋಗಿರುವುದಿಲ್ಲ. ಸ್ಥಳದಲ್ಲಿ ಒಂದು ಕಾರು ಇತ್ತು. ಆದರೆ ಅಲ್ಲಿ ಯಾವುದೇ ಆಭರಣಗಳನ್ನು ತೋರಿಸಿರುವುದಿಲ್ಲ.

ನಿಪಿ-5ರಲ್ಲಿ ಏನು ಬರೆದಿದೆ ಎನ್ನುವುದು ನನಗೆ ಗೊತ್ತಿಲ್ಲ. ಪೋಲಿಸರು ಹೇಳಿದ್ದರಿಂದ ಸಹಿ ಮಾಡಿರುತ್ತೇನೆ.

ಸಾಕ್ಷಿಗೆ 4 ಛಾಯಾಚಿತ್ರಗಳನ್ನು ತೋರಿಸಲಾಗಿ ಅವುಗಳಲ್ಲಿ ತನ್ನ ಇರುವಿಕೆಯನ್ನು ಒಪ್ಪಿಕೊಂಡಿದ್ದರಿಂದ ಸದರಿ ಛಾಯಾಚಿತ್ರಗಳನ್ನು ಕ್ರಮವಾಗಿ ನಿಪಿ-6 ರಿಂದ 9 ಎಂದು

ಗುರುತಿಸಲಾಯಿತು. ಸದರಿ ಛಾಯಾಚಿತ್ರಗಳನ್ನು ಪೋಲಿಸರು ಮೇಲೆ ಹೇಳಿದ ಸ್ಥಳದಲ್ಲಿ ತೆಗೆಸಿರುತ್ತಾರೆ. ಸದರಿ ಛಾಯಾಚಿತ್ರಗಳನ್ನು ಯಾವ ಕಾರಣಕ್ಕಾಗಿ ತೆಗೆಸಿದ್ದಾರೆ ಎನ್ನುವುದು ನನಗೆ ಗೊತ್ತಿಲ್ಲ.

**(ಈ ಸಂದರ್ಭದಲ್ಲಿ ಸ.ಸ.ಅಭಿಯೋಜಕರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀಸವಾಲಿಗೆ ಒಳಪಡಿಸಲು ಅನುಮತಿಯನ್ನು ಕೋರಿರುತ್ತಾರೆ. ಅನುಮತಿಸಲಾಯಿತು.)**

**ಪಾಟೀಸವಾಲುಃ ಸಹಾಯಕ ಸರಕಾರಿ ಅಭಿಯೋಜಕರಿಂದ,**

ದಿನಾಂಕ 31-07-2020 ರಂದು ಹೊನ್ನಾವರ ಪೋಲೀಸರು ನಾನು ಮತ್ತು ಚಾಸಾ-2 ನ್ನು ಠಾಣೆಗೆ ಕರೆಸಿ ಈಗ ನ್ಯಾಯಾಲಯದ ಮುಂದೆ ಇರುವ ಆರೋಪಿಗಳನ್ನು ತೋರಿಸಿ ಅವರು ಸ್ವ ಇಚ್ಛಾ ಹೇಳಿಕೆಗಳಲ್ಲಿ ಕಳುವು ಮಾಡಲು ಹೋಗುವಾಗ ಮತ್ತು ಕಳುವು ಮಾಡಿದ ನಂತರ ಉಪಯೋಗಿಸಿದ ಕಾರು ಮತ್ತು ಮೋಟಾರು ಸೈಕಲ್ಲನ್ನು ತೋರಿಸುತ್ತೇವೆ ಎಂದು ಹೇಳಿದ್ದಾರೆ ಆದ್ದರಿಂದ ನಮ್ಮನ್ನು ಪಂಚರಾಗಿ ಸಹಕರಿಸಲು ಕೋರಿದರು ಎಂದರೆ ಸರಿಯಲ್ಲ. ನಂತರ ಈಗ ನ್ಯಾಯಾಲಯದ ಮುಂದಿರುವ ಆರೋಪಿಗಳು ನಮ್ಮನ್ನು ಮತ್ತು ಪೋಲಿಸರನ್ನು ಚಂದಾವರ ಗ್ರಾಮಕ್ಕೆ ಕರೆದುಕೊಂಡು ಹೋಗಿ ಅವರ ಮನೆಯ ಎದುರು ನಿಲ್ಲಿಸಿದ್ದ ಕಾರನ್ನು ತೋರಿಸಿದ್ದು ಅದನ್ನು ಪರಿಶೀಲಿಸಲಾಗಿ ಅದು ಮಾರುತಿ ರಿಡ್ಜ ಕಾರ್ ಸಂಖ್ಯೆಕೆಎ-05/ಎಎಫ್-4914 ಇತ್ತು ಮತ್ತು ಅದರ ಡೇಶ್ ಬೋರ್ಡನಲ್ಲಿ ಒಂದು ಕಬ್ಬಿಣದ ರಾಡು ಮತ್ತು ಒಂದು ಅಗಲವಾದ ಚೂಪಾದ ರಾಡು ಇದ್ದು ಅವುಗಳನ್ನು ಮನೆ ಒಡೆಯಲು ಉಪಯೋಗಿಸಿದ್ದಾಗಿ ಆರೋಪಿಗಳು ಹೇಳಿದರು ಎಂದರೆ ಸರಿಯಲ್ಲ. ತದನಂತರ ಆರೋಪಿಗಳು ಮನೆಯ ಒಳಗೆ ಕರೆದುಕೊಂಡು ಹೋಗಿ ಕಿಡಕಿ ಕಪಾಟಿನಲ್ಲಿದ್ದ ಬಂಗಾರದ ಮೂಗುತಿಯನ್ನು ಹಾಜರು ಮಾಡಿ ಅದನ್ನು ಕಡತೋಕಾ ಆಸ್ಪತ್ರೆ ಹತ್ತಿರ ಇರುವ ಮನೆಯಲ್ಲಿ ಕಳ್ಳತನ ಮಾಡಿದ್ದಾಗಿ ತಿಳಿಸಿದ್ದು ಅದನ್ನು ಪರಿಶೀಲಿಸಲಾಗಿ ಅದರ ಅಂದಾಜು ತೂಕ 0.5 ಗ್ರಾಂ ಇತ್ತು ಎಂದರೆ ಸರಿಯಲ್ಲ. ಈ ಎಲ್ಲಾ ಸಂಗತಿಗಳಿಗೆ ಸಂಬಂಧಿಸಿದಂತೆ ಪೋಲೀಸರು ನಿಪಿ-5 ರ ಪ್ರಕಾರ ನಮ್ಮ ಸಮಕ್ಷಮ ಪಂಚನಾಮೆ ಮಾಡಿ ಕಾರು, ಕಬ್ಬಿಣದ ರಾಡುಗಳು ಮತ್ತು ಮೂಗೂತಿಯನ್ನು ಜಪ್ತು ಮಾಡಿಕೊಂಡು ನನ್ನ ಸಹಿ ಪಡೆದಿದ್ದಾರೆ ಎಂದರೆ ಸರಿಯಲ್ಲ. ಆ ಸಂದರ್ಭದಲಿ ನಿಪಿ-6 ರಿಂದ 9 ರ ಪ್ರಕಾರ ಛಾಯಾಚಿತ್ರ ತೆಗೆದರು ಎಂದರೆ ಸರಿಯಲ್ಲ. ಈಗ ನ್ಯಾಯಾಲಯದ ಮುಂದೆ ಇರುವ ಆರೋಪಿಗಳನ್ನು ನಾನು ಈ ಮೊದಲು ನೋಡಿಲ್ಲ. ಆರೋಪಿಗಳು ನನಗೆ ಪರಿಚಯ ಇದ್ದಾರೆ, ಆದ್ದರಿಂದ ಅವರಿಗೆ ಸಹಾಯ ಮಾಡಲು ಈಗ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ ಆರೋಪಿಗಳ ಪರ ವಕೀಲರಿಂದಃ ಇರುವುದಿಲ್ಲ.**

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಗಣಕೀಕೃತ ಮಾಡಿಸಲಾಯಿತು)**

ಓ.ಹೇ.ಕೇ. ಸರಿ ಇದೆ.

**ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು**
**ಪ್ರ.ದ.ನ್ಯಾದಂಡಾಧಿಕಾರಿಗಳು, ಹೊನ್ನಾವರ**